5) ಕರುಣಾ ಟ್ರಸ್ಟ್, ಯಳಂದೂರು ಟಿ.ನರಸೀಪುರ ತಾ. ಮೈಸೂರು ಜಿಲ್ಲೆ

6) ಅಂಗವಿಕಲರ ಆಸ್ಪತ್ರೆ, ಹುಬ್ಬಳ್ಳಿ

7) ಬೈಟ್ ಇಂಡಿಯ, ಬೆಳ್ತಂಗಡಿ, ದಕ್ಷಿಣ ಕನ್ನಡ ಜಿಲ್ಲೆ.

8) ಸೆಂಟ್ ಜೋಸೆಫ್ ಲೆಪ್ರಸಿ ಆಸ್ಪತ್ರೆ ಕನಕನಾಡಿ, ದಕ್ಷಿಣ ಕನ್ನಡ ಜಿಲ್ಲೆ

ಇ) ಈ ಕೇಂದ್ರಗಳಲ್ಲಿ ರೋಗ ಉಲ್ಬಣಗೊಂಡ ಕುಷ್ಠರೋಗಿಗಳನ್ನು ಸೇರಿಸಿಕೊಂಡು ಅವರಿಗೆ ಚಿಕಿತ್ಸೆ ನೀಡಿ ಮತ್ತು ಅಂಗವಿಕಲ ರೋಗಿಗಳಿಗೆ ಬೇಕಾದ ಶಸ್ತ್ರ ಚಿಕಿತ್ಸೆ ಮಾಡಿ, ಅವರಿಗೆ ಬೇಕಾದ ವೃತ್ತಿಪರ ಕೆಲಸಗಳನ್ನು ಕಲಿಸಿ ಸಮಾಜದಲ್ಲಿ ಎಲ್ಲರಂತೆ ಜೀವನ ಮಾಡಲು ಈ ಕೇಂದ್ರದಲ್ಲಿ ವ್ಯವಸ್ಥೆ ಮಾಡಲಾಗಿದೆ.

ವಿಷಯ: ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲು ಬಂದಿರುವ ಅರ್ಜಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 162 (110)

ಶ್ರೀ ಹೆಚ್.ಶಿವಪ್ಪ (ಹರಿಹರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲು ಕೋರಿ ಖಾಸಗಿ ಸಂಸ್ಥೆಗಳಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು? ಮತ್ತು ಅವುಗಳಲ್ಲಿ ಮಂಜೂರಾತಿಯಾದ ಸಂಖ್ಯೆಗಳೆಷ್ಟು?

ಆ) ಆಂಗ್ಲ ಶಾಲೆ ತೆರೆಯಲು ಮಂಜೂರಾತಿ ನೀಡಲು ಸರ್ಕಾರದವರಿಗೆ ಇರುವ ತೊಂದರೆಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

1996-97ನೇ ಸಾಲಿಗೆ ಖಾಸಗಿ ಸಂಸ್ಥೆಗಳಿಂದ ಆಂಗ್ಲ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಬಂದಿರುವ

	ಪ್ರೌಢ ಶಾಲೆಗಳು	ಹಿರಿಯ ಪ್ರಾಥಮಿಕ ಶಾಲೆಗಳು
ಅರ್ಜಿಗಳ ಸಂಖ್ಯೆ	214	154
ಮಂಜುರಾದ ಸಂಖ್ಯೆ	109	99

ಆ) ಸರ್ಕಾರದ ಆದೇಶ ಸಂಖ್ಯೆ : ಇಡಿ 28 ಪಿಜಿಸಿ 94 ದಿನಾಂಕ 29-4-94ರಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅನುಸರಿಸಬೇಕಾದ ಭಾಷಾ ನೀತಿಯನ್ನು ಹೊರಡಿಸಿದೆ. ಅದರನ್ವಯ 1ರಿಂದ4ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷೆಯಲ್ಲಿ ತರಗತಿಗಳನ್ನು ನಡೆಸುವುದು ಕಡ್ಡಾಯವಾಗಿದೆ. 5ನೇ ತರಗತಿಯಿಂದ ಆಂಗ್ಲ ಭಾಷೆಯಲ್ಲಿ ತರಗತಿಗಳನ್ನು ನಡೆಸಲು ಕೋರಿದಲ್ಲಿ ಅದರಂತೆ ಪರಿಶೀಲಿಸಿ 5ನೇ

ತರಗತಿಯಿಂದ ಆಂಗ್ಲ ಮಾಧ್ಯಮ ಶಾಲೆಗಳಿಗೆ ಮಂಜೂರಾತಿ ನೀಡಲಾಗುತ್ತಿದೆ. ಆದುದರಿಂದ 5ನೇ ತರಗತಿಯಿಂದ ಆಂಗ್ಲ ಶಾಲೆ ನಡೆಸಲು ಮಂಜೂರಾತಿ ನೀಡುವಲ್ಲಿ ಯಾವ ತೊಂದರೆಗಳೂ ಇಲ್ಲ.

ವಿಷಯ:- ಮೈಸೂರಿನ ಜಯಲಕ್ಷ್ಮಿಪುರದ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಒತ್ತಾಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 163 (462)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಜಯಲಕ್ಷ್ಮಿಪುರಂನ ಎ.ಶಂಕರ ಶೆಟ್ಟಿ ಲಕ್ಷ್ಮಿದೇವಮ್ಮ ಆಸ್ಪತೆಯಲ್ಲಿ ಈಗ 10 ಹಾಸಿಗೆಗಳ ಸೌಲಭ್ಯವಿದ್ದು, ಇದನ್ನು ನೂರು ಹಾಸಿಗೆಗಳ ಸೌಲಭ್ಯವನ್ನು ಕಲ್ಪಿಸಿ, ಮೇಲ್ದರ್ಜೆಗೇರಿಸಬೇಕೆಂದು ಮನವಿಗಳು ಬಂದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ|| ಹೆಚ್.ಸಿಸಮಹದೇವಪ್ಪ (ಆರೋಗ್ಯ ಸಚಿವರು):-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಕೆ.ಶರಣಪ್ಪ (ಅಧ್ಯಕ್ಷರು ಅಧೀನ ಶಾಸನ ರಚನಾ ಸಮಿತಿ):- ಮಾನ್ಯ ಅಧ್ಯಕ್ಷರೇ, ಅಧೀನ ರಚನಾ ಸಮಿತಿಯ 21ನೇ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್ (ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ):- ಮಾನ್ಯ ಅಧ್ಯಕ್ಷರೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಐದು, ಆರು, ಏಳು, ಎಂಟು ಮತ್ತು ಒಂಭತ್ತನೆ ವರದಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ವರದಿಗಳನ್ನು ಒಪ್ಪಿಸಲಾಗಿದೆ. ನಾನು ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ಯಾರ ಮನಸ್ಸನ್ನು ನೋಯಿಸಬೇಕೆಂಬ ಅಭಿಪ್ರಾಯ ಇಲ್ಲ. ಇಂಥವರಿಗೆ ಅವಕಾಶ ಕೊಡಬಾರದು ಎಂದು ಕೂಡ ಇಲ್ಲ. ಇವೊತ್ತು ಅರ್ಧಘಂಟೆ ಕಾಲ ಹೆಚ್ಚು ಕ್ವೊಶ್ಚನ್ ಅವರ್‌ನ್ನು ಮಾಡಿದ್ದೇವೆ. ಎಲ್ಲಾ